ಊರುಗಳಲ್ಲಿ, ಆಸ್ಪತ್ರೆಗಳಲ್ಲಿ ಪಶುವೈದ್ಯೆಯರಾಗಿ ಸೇರಿಕೊಳ್ಳುತ್ತೇವೆ. ಸಂಬಳಕ್ಕಾಗಿ ದುಡಿಯುವ ಜಾಯಮಾನ ನಮ್ಮದಾಗಿರಲಿಲ್ಲ. ವಿದ್ಯಾರ್ಥಿದೆಸೆಯಿಂದಲೂ ಅಷ್ಟೇ. ಏನಾದರು ಸಾಧಿಸಬೇಕೆಂಬ ಹಂಬಲ. ಸವಾಲು ಸ್ವೀಕರಿಸಲು ಛಲ. ಹುಡುಗೀರು ವೆಟರಿನರಿ ಓದಿ ಏನು ಮಾಡ್ತಾರೆ ಎಂಬ ಹೀಯಾಳಿಕೆಯ ಮಾತು ಸುಳ್ಳು ಮಾಡುವ ತವಕ ನಮ್ಮಿಬ್ಬರಿಗೂ. ಹಳ್ಳಿಗಳಲ್ಲಿ ಪ್ರತಿ ಪಶುಸಂಗೋಪನೆಯ ಕೆಲಸ ಹೆಂಗಸರಲ್ಲದೆ ಗಂಡಸರು ಮಾಡ್ತಾರಾ. ಪಶುಸಂಗೋಪನೆಯ ಮೂಲಕ ನಮ್ಮ ಹಿಂದುಳಿದ ಹಳ್ಳಿಗರ ಆರ್ಥಿಕ ಮಟ್ಟ, ಜೀವನ ಮಟ್ಟ ಏರಿಸುವ ಬಗ್ಗೆ ಇಬ್ಬರೂ ಕುಳಿತು ಚರ್ಚೆ ಮಾಡುತ್ತೇವೆ.

ನಮ್ಮ ಕಡೆ ಹೈನುಗಾರಿಕೆಯೇ ಉತ್ತಮ ಮಾರ್ಗ ಎಂದು ತೀರ್ಮಾನಕ್ಕೆ ಬರುತ್ತೇವೆ. ಆಸ್ಪತ್ರೆಯಲ್ಲೂ, ಬಿಡುವಿನ ವೇಳೆಯಲ್ಲೂ ಹಾಗೂ ಸಂಜೆ, ರಾತ್ರಿ ವೇಳೆ ಹೆಂಗಸರನ್ನು ಸೇರಿಸಿ ಅವರಿಗೆ ಡೈರಿ ಬಗ್ಗೆ ಒತ್ತಿ ಒತ್ತಿ ಹೇಳುತ್ತೇವೆ. ಅವರಿಗೆ ಡೈರಿ ಹಸುಗಳನ್ನು ಸಾಕಲು ಪ್ರೋತ್ಸಾಹಿಸುತ್ತೇವೆ. ಲಾಭದಾಯಕ ಸೂತ್ರ,



ಸಲಹೆಗಳನ್ನು ಸೂಚಿಸುತ್ತೇವೆ. ಕೊನೆಗೂ ನಮ್ಮಿಬ್ಬರ ಪ್ರಯತ್ನಗಳು ಫಲಿಸುತ್ತವೆ. ಬ್ಯಾಂಕ್ ಗಳಿಂದ ಸಾಲ ಪಡೆಯುತ್ತಾರೆ. ಜೆರ್ಸಿ ಹಸುಗಳನ್ನು ಹೆಚ್.ಎಫ್. ಕ್ರಾಸ್ ಗಳನ್ನೂ ಕೊಂಡುಕೊಳ್ಳುತ್ತಾರೆ. ಡೈರಿಗೆ ಹಾಲು ಹಾಕುತ್ತಾರೆ. ಇತ್ತೀಚೆಗೆ ಮೇಕೆ ಹಾಲಿಗೆ ಹೆಚ್ಚು ಬೇಡಿಕೆ ಇದೆ. ಕೆಲವರಿಗೆ ಡೈರಿ ಮೇಕೆ ಸಾಕಲು ಉತ್ತೇಜಿಸುತ್ತೇವೆ. ಮೇಕೆ ಹಾಲಿನ ಮಾರಾಟಕ್ಕೂ ವ್ಯವಸ್ಥೆ ಮಾಡುತ್ತೇವೆ. ಹೆಂಗಸರ ಕೈಯಲ್ಲಿ ಹಣ ಓಡಾಡುತ್ತದೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತದೆ. 'ಸಾಲದ ಕಂತುಗಳನ್ನು ತಪ್ಪದೆ ಕಟ್ಟಬೇಕು...' ತಾಜ್ ಒತ್ತಿ ಒತ್ತಿ ಹೇಳುತ್ತಾಳೆ. 'ಆಯಿತು ಡಾಕ್ಟರಮ್ಮ...' ಅನ್ನುತ್ತಾರೆ. ನಾನೂ ಅದನ್ನೇ ಮತ್ತೆ ತೆಲುಗಿನಲ್ಲಿ ಹೇಳುತ್ತೇನೆ. 'ಆಯಲೇ ಮಯೀ..' ಅನ್ನುತ್ತಾರೆ. 'ಯಾರೂ ನನ್ನ ಡಾಕ್ಟರಮ್ಮ ಅನ್ನುವುದೇ ಇಲ್ಲವಲ್ಲಾ. ನಾನೂ ಬಿಳಿ ಕೋಟು ಹಾಕಿದ್ದೀನಿ, ಕೈಯಲ್ಲಿ ಸ್ಟೆಥೋಸ್ಕೋಪ್ ಇದೆ.' ಎನ್ನುತ್ತೇನೆ. ತಾಜ್ ಬಿದ್ದು ಬಿದ್ದು ನಗುತ್ತಾಳೆ. ನಿಜ, ಡಾ. ತಾಜ್ ಅಂದರೆ ಭಯ. ತಾನೆಂದರೆ ಸಲಿಗೆ! ಇಲ್ಲಿ ಎರಡು ವರ್ಷ ಕೆಲಸ ಮಾಡುತ್ತೇವಷ್ಟೇ. ಮತ್ತೆ ಮುಂದೆ ಓದಲು ಹೊರಟು ಬರುತ್ತೇವೆ. ನಾನೂ ಇಜತ್ ನಗರದಲ್ಲಿದ್ದರೂ ಊರು ಕಡೆಯ ಸಮಾಚಾರಗಳು ಬರುತ್ತಲೇ ಇರುತ್ತವೆ. ಈಗ ಊರಲ್ಲಿ ಹಳ್ಳಿಕಾರ ಹಸುಗಳು ಒಂದೂ ಇಲ್ಲ. ಎಲ್ಲ ಡೈರಿ ಹಸುಗಳೇ. ಡೈರಿ ಚೆನ್ನಾಗಿ ನಡೆಯುತ್ತಿದೆ. ಹಾಲು ಹರಿಯುತ್ತಿದೆ! ಹೀಗೆಲ್ಲಾ. ನನ್ನ ಹಾಗೂ ತಾಜ್ ಳ ಆಸೆಯೂ ಅದೇ ಆಗಿತ್ತು. ಹಾಲಿನ ಹೊಳೆ ಹರಿಸಬೇಕು ಎಂದು. ಕೇಳಿ ಬಹಳ ಸಂತೋಷ ಆಯಿತು. ಈ ವಿಷಯ ತಾಜ್ ಗೂ ತಿಳಿಸಬೇಕು.

ಸಂಕ್ರಮಣ, ಜನ ಮುಂದುವರೆದಿದ್ದಾರೆ. ಕಾಲ ಬದಲಾಗಿದೆ. ಊರು ಬದಲಾಗಿದೆ. ಜನ ಬದಲಾಗಿದ್ದಾರೆ. ಕಾಲ ಬದಲಾಗಿದೆಯೋ ಜನ ಬದಲಾಗಿದ್ದಾರೆಯೋ ತಿಳಿಯದು. ಅಂತೂ ಮೊದಲಿನ ಹಾಗಿಲ್ಲ. ಎಲ್ಲಾರು ಕಲಿ ಓಡಾಡುತ್ತಿದ್ದಾನೆ ಅಂತಾರೆ ಎಂದೂ ಸಮಾಚಾರ ಬರುತ್ತದೆ.

ಎಲ್ಲವೂ ಸರಿ. ಆದರೆ ಅಮ್ಮಣ್ಣಿ ಸ್ವಾಮಿಯೋರನ್ನ ನೆನೆಸಿಕೊಂಡರೆ ನೋವಾಗುತ್ತದೆ. ಊರಿನಲ್ಲಿ ಎಲ್ಲಾರೂ ಮೇಲೆ ಬಂದಿದ್ದಾರೆ. ಆದರೆ ಸ್ವಾಮಿಯೋರ ಮನೆಯೋರು ಕೆಳಗಾಗಿದ್ದಾರೆ. ಸ್ವಾಮಿಯೋರ ಮನೆಯೋರು ಚೆನ್ನಾಗಿ ಬಾಳಿದವರು. ಈಗ ಬಡವರಾಗಿದ್ದಾರೆ. ಹಳ್ಳಿಯಲ್ಲಿ ಎಲ್ಲರದೂ ನವೀನ ಮನೆಗಳಾಗಿವೆ. ಅವರದು ಮಾತ್ರವೇ ಹಳೇ ಮನೆ. ಕೊರಗು. ಸೊರಗಿ ಹೋಗಿದ್ದಾರೆ. ಅವರು ಸೊರಗಿರುವುದು ಬಡತನದಿಂದಲ್ಲ, ಮಗನಿಂದಾಗಿ. ಶಂಕರಪ್ಪ ಸ್ವಾಮಿ, ನಾವು ಅವರನ್ನು ಕರೆಯುವುದು ಚಿನ್ನ ಸ್ವಾಮುಲು ಅಂತಲೇ. ಅವರು ಸರಿಯಾಗಿ ಓದಲಿಲ್ಲ. ಸಿಗರೇಟು ಕುಡಿಯುತ್ತಾರೆ. ಮಾಂಸ ತಿನ್ನುತ್ತಾರೆ. ದನದ ಮಾಂಸಾನೂ ಬಿಡೋಲ್ಲ. ಹಂದಿ ಮಾಂಸಾನೂ ಬಿಡೋಲ್ಲ. ಸಾರಾಯಿ ಕುಡಿಯುತ್ತಾರೆ. ಅವರ ಪಾಲಿಗೆ ನಾಟಿ ಸಾರಾಯಿಯೇ ಹಾಲು! ಮನೆಯ ಹಸು ಹಾಲು ಮಾರಿಕೊಂಡು ಸಾರಾಯಿ ಕುಡಿದು ಬರುತ್ತಾರೆ. ಸ್ವಾಮಿಯವರೇನೋ ಒಳ್ಳೆಯವರೇ. ಆದರೆ ಏನು ಮಾಡೋದು. ನಮಗೆಲ್ಲಾ ಬುದ್ಧಿ ಹೇಳಬೇಕಾದವರು ಹೀಗಾದರಲ್ಲಾ ಅಂತ ನೋವಾಗುತ್ತದೆ. ಸ್ವಾಮಿ ಅಮಾಯಕ. ಕೆಲವರು ಕೆಡಿಸಿದರು. ಜಾತಿ ಭ್ರಷ್ಟ ಮಾಡಿ ಖುಷಿಪಟ್ಟರು. ವೇದ ಮಂತ್ರಗಳು ಮೊಳಗುತ್ತಿದ್ದ ಮನೆ. ಅಮ್ಮಣ್ಣಿಯ ಶ್ಲೋಕಗಳೂ ಸ್ವಾಮಿಯೋರ ಮಂತ್ರಗಳೂ ಕೇಳಿ ಬರುತ್ತಿದ್ದ ಆ ಮನೆಯಿಂದ ಈಗ ಶಂಕರಪ್ಪ ಸ್ವಾಮಿಯ ಕುಡಿತದ ಅಮಲಿನ ಬಾಯಿಂದ ಮೂಲುಗಾಟ ಕೇಳಿ ಬರುತ್ತದೆ. ಸದಾ ಸುಶ್ರಾವ್ಯ ಲಯಬದ್ಧ ಪೂಜಾ ಘಂಟಾನಾದ ಕೇಳಿ ಬರುತ್ತಿದ್ದ ಆ ಮನೆಯಲ್ಲಿ ಈಗ ಆಗಾಗ್ಗೆ ಚಿನ್ನಸ್ವಾಮಿಗಳು ಸಾರಾಯಿ ಅಮಲಿನಲ್ಲಿ ಬಿಸಾಡುವ ಪಾತ್ರೆಗಳ ಕರ್ಕಶ ಶಬ್ದಕೇಳಿಬರುತ್ತದೆ.

***

ಪಟ್ಟಣ ದಾಟಿ ಬಸ್ಸು ಹೆದ್ದಾರಿ ಕ್ರಾಸ್ ಹತ್ತಿರ ಹತ್ತಿರ ಬಂದಾಗ ಬಸ್ಸು ಹಠಾತ್ತನೆ ನಿಲ್ಲುತ್ತದೆ. ತೂಕಡಿಸುತ್ತಿದ್ದ ತಾನು ಎಚ್ಚರಗೊಳ್ಳುತ್ತೇನೆ. ಬಸ್ಸಿನಲ್ಲಿ ಪಿಸಪಿಸ ಮಾತು. 'ಆಕ್ಸಿಡೆಂಟ್..' 'ಯಾರೋ ಸತ್ತಿದ್ದಾರೆ...' ಹೀಗೆ! ಬಸ್ಸಿನಿಂದ ಗಂಡಸರೆಲ್ಲಾ ಟವಲ್ ಭುಜದ ಮೇಲೆ ಹಾಕಿಕೊಂಡು ದಪದಪನೆ ನೂಕು ನುಗ್ಗಲಾಗಿ ಕೆಳಗಿಳಿಯುತ್ತಾರೆ. ಇಂತಹ ವಿಷಯಗಳಲ್ಲಿ ನಮ್ಮೂರ ಮಂದಿಗೆ ಕುತೂಹಲ ಜಾಸ್ತಿ! ಕೆಳಗಿಳಿದು ವಾಪಸು ಬಂದ ಅಜ್ಜಿ. 'ಅಯ್ಯೋ, ಆಕ್ಸಿಡೆಂಟು ಇಲ್ಲ, ಏನು ಇಲ್ಲ.. ಏನೋ ಎಲ್ಲಾರು ಹಾವು ಹಾವು ಅಂತ ಓಡ್ತಾ ಇದ್ದಾರೆ' ಎನ್ನುತ್ತಾ ಬೊಚ್ಚು ಬಾಯಿಂದ ನಗುತ್ತಾಳೆ. ನಾನೂ ಬಸ್ಸಿನಿಂದ ಇಳಿದು ಮುಂದೆ ಮುಂದೆ ನಡೆಯುತ್ತೇನೆ. ಬಸ್ಸಿನ ಮುಂದೆ ಇನ್ನೆರಡು ಬಸ್ಸುಗಳು ನಿಂತಿವೆ. ನಾಲ್ಕೈದು ಲಾರಿಗಳು, ಹತ್ತು ಹನ್ನೆರಡು ಮೋಟರು ಬೈಕುಗಳು ನಿಂತಿವೆ. ಎದುರುಗಡೆಯಿಂದ ಬರುತ್ತಿದ್ದ ಬಸ್ಸುಗಳೂ ಆ ಕಡೆ ನಿಂತಿವೆ. ಜನರ ಗುಂಪೇ ಕೂಡಿದೆ. ಬಹಳಷ್ಟು ಮಂದಿ ತನಗೆ ಪರಿಚಯಸ್ಥರೇ. ಕೂಗಾಟ ಕಿರುಚಾಟದಲ್ಲಿ ಏನೂ ಅರ್ಥವಾಗಲಿಲ್ಲ. ಮುಂದೆ ಮುಂದೆ ನಡೆಯುತ್ತೇನೆ. ನಾಲ್ಕೈದು ಹಾಲಿನ ಟ್ಯಾಂಕರುಗಳು ನಿಂತಿವೆ. ಆ ದೃಶ್ಯ ನೋಡಿ ಮೈ ಜುಂ ಎನ್ನುತ್ತದೆ. ಕಪಾಳಕ್ಕೆ ಫಳಾರ್ ಫಳಾರ್ ಹೊಡೆದಂತಾಗುತ್ತದೆ. ರಸ್ತೆ ಮಧ್ಯೆ ಪುಟಗೋಸಿಯಲ್ಲಿ ನಿಂತ ಇಬ್ಬರು, ನಮ್ಮೂರ ಈರಪ್ಪ, ಪಕ್ಕದೂರ ಸೋಮಪ್ಪ, ಬಕೆಟ್ ಬಕೆಟ್ ಹಾಲು ತಲೆ ಮೇಲೆ ಸುರಿದುಕೊಂಡು ಸ್ನಾನ ಮಾಡುತ್ತಿದ್ದಾರೆ! ಹಾಲಿನ ಟ್ಯಾಂಕರುಗಳಿಂದ ಪೈಪುಗಳಲ್ಲಿ ಹಾಲು ರಸ್ತೆಗೆ ಬಿಡುತ್ತಿದ್ದಾರೆ! ರಸ್ತೆ ಮೇಲೆ ಹರಿಯುತ್ತಿರುವ ಹಾಲಿನಲ್ಲಿ ಕೆಲವರು ಕುಣಿಯುತ್ತಿದ್ದಾರೆ! ಕರ್‍ರಗಿದ್ದ ಟಾರ್ ರಸ್ತೆ ಹಾಲಿನಿಂದ ಬೆಳ್ಳಗಾಗಿದೆ! ಸುರಿದ ಹಾಲು ರಸ್ತೆಯಿಂದ ಎರಡೂ ಬದಿಗೆ ಹರಿದು ಚರಂಡಿಗೆ ಬೀಳುತ್ತಿದೆ! ಚರಂಡಿಯ ಕೊಳಚೆ ಹಾಲುಮಯ! ತಮಗೇನಾದರೂ ಹಾಲು ಸಿಗುವುದೆಂಬ ಭ್ರಮೆಯಲ್ಲಿ ಕೂಲಿಯಾಳುಗಳ ಬಡ ಮಕ್ಕಳು ಪಾತ್ರೆ ಹಿಡಿದು ನಿಂತಿದ್ದಾರೆ! ಮುಷ್ಕರ ಮಂದಿ ಘೋಷಣೆ ಕೂಗುತ್ತಿದ್ದಾರೆ. 'ಹೋರಾಟ ಹೋರಾಟ' 'ಹಾಲಿನ ದರ ಹೆಚ್ಚಿಸಿ' 'ಸಾಲ ಮನ್ನಾ ಮಾಡಿ' ಕೂಡಿರುವ ಜನರಲ್ಲಿ ಕೆಲವರ ಮುಖದಲ್ಲಿ ಆವೇಶ, ಕೆಲವರ ಮುಖದಲ್ಲಿ ವ್ಯಸನ, ಕೆಲವರ ಮುಖದಲ್ಲಿ ನಗು. ನನ್ನ ಪಕ್ಕದಲ್ಲೇ ನಿಂತಿರುವ ಕೆಲವರು ಹೆಂಗಸರು ಗೊಣಗುಟ್ಟುತ್ತಿದ್ದಾರೆ.

'ಏನನ್ಯಾಯ, ಇವರೇನು ಹುಲ್ಲು ಮೇಯ್ದು ತಮ್ಮ ಎದೆಯಿಂದ ಸುರಿಸಿದ ಹಾಲೇ...' 'ಥೆ, ಇದೆಂತ ಸ್ಟ್ರೈಕು....'

'ಎಷ್ಟು ಹಾಲು ವೇಸ್ಟು. ಬಡ ಮಕ್ಕಳಿಗೆ ಹಂಚಿದ್ದರೆ? ಆಸ್ಪತ್ರೆ ರೋಗಿಗಳಿಗೆ ಕೊಟ್ಟಿದ್ದರೆ?' 'ಸ್ಕೂಲು ಮಕ್ಕಳಿಗೆ ಕುಡಿಯಲು ಕೊಟ್ಟಿದ್ದರೆ?'

ಎರಡು ವರ್ಷದ ಮೇಲೆ ಊರಿಗೆ ಬರುತ್ತಿರುವ ತನಗೆ ಎಂತಹ ಸ್ವಾಗತ! ತಾನು ನೋಡಬಯಸಿದ್ದೇನು? ತಾನು ನೋಡುತ್ತಿರುವುದೇನು? ಲೋಪ ಎಲ್ಲಿದೆ? ಇದು ಬೇಕಿತ್ತೇ? ಮನ ಮರುಗುತ್ತದೆ. ಹೊಳೆಯಾಗಿ ಹರಿಯುತ್ತಿರುವ ಹಾಲನ್ನೇ, ಹೊಲಸಿನೊಂದಿಗೆ ಕಲಸಿಹೋಗುತ್ತಿರುವ ಹಾಲನ್ನೇ ನೋಡುತ್ತಾ ನಿಲ್ಲುತ್ತೇನೆ. ■